ಆ) 1) ಲೆಕ್ಕ ಅಧೀಕ್ಷಕರು 1
2) ಕಛೇರಿ ವ್ಯವಸ್ಥಾಪಕರು 1
3) ಅಕೌಂಟೆಂಟ್ 1
4) ಹಿರಿಯ ಆರೋಗ್ಯ ನಿರೀಕ್ಷಕ 3
5) ಪ್ರಥಮ ದರ್ಜೆ ಸಹಾಯಕ 2
6) ಶೀಘ್ರಲಿಪಿಗಾರರು 2
7) ಪ್ರಥಮ ದರ್ಜೆ ಕಂದಾಯ ನಿರೀಕ್ಷಕರು 2
8) ಕಿರಿಯ ಆರೋಗ್ಯ ನಿರೀಕ್ಷಕ 3

ಇ) ಅಭಿಯಂತರರುಗಳನ್ನು ಭರ್ತಿ ಮಾಡಲು ಕರ್ನಾಟಕ ಲೋಕಸೇವಾ ಆಯೋಗಕ್ಕೆ ಪತ್ರಬರೆದು ಕ್ರಮವಹಿಸಲಾಗಿದೆ ಹಾಗೂ ಇತರೆ ಹುದ್ದೆಗಳನ್ನು ವರ್ಗಾವಣೆ ಮುಖಾಂತರ ಭರ್ತಿ ಮಾಡಲಾಗುತ್ತಿದೆ.

229 (22) : ಶ್ರೀ ಬೋಪಯ್ಯ, ಕೆ.ಜಿ. (ಮಡಿಕೇರಿ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಡಿಕೇರಿ ನಗರದ ಕುಡಿಯುವ ನೀರಿನ ಸಮಸ್ಯೆಗೆ ಕಾವೇರಿ ನದಿಯ ಬೇತ್ರಿಯಿಂದ ನೀರು ಸರಬರಾಜು ಮಾಡಲು ಕೈಗೊಂಡ ಯೋಜನೆ ಯಾವ ಹಂತದಲ್ಲಿದೆ;

ಆ) ಕುಡಿಯುವ ನೀರಿನ ಸಮಸ್ಯೆಯ ಪರಿಹಾರಕ್ಕೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಎನ್. ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ಮಡಿಕೇರಿ ನಗರಕ್ಕೆ ಕಾವೇರಿ ನದಿ ಮೂಲದಿಂದ ಕುಡಿಯುವ ನೀರು ಸರಬರಾಜು ಯೋಜನೆಯನ್ನು ರೂ. 15.00 ಕೋಟಿಗಳಿಗೆ ತಯಾರಿಸಿದ್ದು, ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಈ ಯೋಜನೆಗಾಗಿ ಆಯವ್ಯಯದಲ್ಲಿ ಸಾಕಷ್ಟು ಹಣ ಒದಗಿಸಿದ ಕೂಡಲೇ ಆಡಳಿತಾತ್ಮಕ ಅನುಮೋದನೆ ನೀಡಲಾಗುವುದು.

230 (882) : ಶ್ರೀ ಚಿಕ್ಕನಗೌಡರ ಸಿದ್ಧನಗೌಡ ಈಶ್ವರಗೌಡ (ಕಲಘಟಗಿ) ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಧಾರವಾಡ ಜಿಲ್ಲೆಯಲ್ಲಿ ಸಣ್ಣ ನೀರಾವರಿ ಇಲಾಖೆಯ ವತಿಯಿಂದ ಕೈಗೆತ್ತಿಕೊಂಡಿರುವ ಕಾಮಗಾರಿಗಳು ಯಾವುವು (ತಾಲ್ಲೂಕುವಾರು ವಿವರಗಳನ್ನು ಒದಗಿಸುವುದು);

ಆ) ಇವುಗಳಲ್ಲಿ, ಕಲಘಟಗಿ ವಿಧಾನಸಭಾ ಕ್ಷೇತ್ರದ ಐದಾರು ಕಾಮಗಾರಿಗಳು ಹಣ ಬಿಡುಗಡೆಯಾಗದೇ ಸ್ಥಗಿತಗೊಂಡಿರುವ ಪ್ರಕರಣಗಳು ಜರುಗಿವೆಯೇ;

ಇ) ಇದಕ್ಕೆ ಕಾರಣಗಳೇನು;

ಈ) ಸದರಿ ಕಾಮಗಾರಿಗಳಿಗಾಗಿ ಈಗಾಗಲೇ ಬಿಡುಗಡೆಯಾದ ಮೊತ್ತವೆಷ್ಟು ಮತ್ತು ನಿಗದಿಪಡಿಸಿದ ಹಣವೆಷ್ಟು;

ಉ) ಈಗಾಗಲೇ ಖರ್ಚಾಗಿರುವ ಹಣವೆಷ್ಟು (ವಿವರಗಳನ್ನು ಒದಗಿಸುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ಧಾರವಾಡ ಜಿಲ್ಲೆಯಲ್ಲಿ ಒಟ್ಟು 28 ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ತಾಲ್ಲೂಕುವಾರು ವಿವರಗಳನ್ನು ಅನುಬಂಧ–1 ರಲ್ಲಿ ನೀಡಲಾಗಿದೆ.

ಆ) ಕಲಘಟಗಿ ವಿಧಾನಸಭಾ ಕ್ಷೇತ್ರದಲ್ಲಿ ಗಳಗಿನಗಟ್ಟಿ ಏತ ನೀರಾವರಿ ಯೋಜನೆ ಕಾಮಗಾರಿ ಮಾತ್ರ ಹಣ ಬಿಡುಗಡೆಯಾಗದೆ ಸ್ಥಗಿತಗೊಂಡಿರುತ್ತದೆ. ಎರಡು ಕಾಮಗಾರಿಗಳನ್ನು ನಬಾರ್ಡ್‌ನಲ್ಲಿ ಕೈಗೆತ್ತಿಕೊಳ್ಳಲಾಗಿದ್ದು ಹೆಚ್ಚುವರಿ ಅನುದಾನಕ್ಕೆ (ಕಾಸ್ಟ್ ಎಸ್ಕಲೇಷನ್) ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಹುಬ್ಬಳ್ಳಿ ತಾಲ್ಲೂಕಿನ ಕಲಘಟಗಿ ವಿಧಾನಸಭಾ ಕ್ಷೇತ್ರದಲ್ಲಿ ಬರುವ ಇನಾಂವೀರಾಪುರ ಬಂದಾರ ನಿರ್ಮಾಣ ಕಾಮಗಾರಿ ಗುತ್ತಿಗೆದಾರರು ನಿಧನರಾದ ಕಾರಣ ಸ್ಥಗಿತಗೊಂಡಿರುತ್ತದೆ.

ಇ) ಅನುದಾನದ ಕೊರತೆ

ಈ) ಸದರಿ ಕಾಮಗಾರಿಗಳಿಗೆ ಈಗಾಗಲೇ ರೂ. 199.80 ಲಕ್ಷ ಹಣ ಬಿಡುಗಡೆಯಾಗಿರುತ್ತದೆ. ಪ್ರತ್ಯೇಕವಾದ ಅನುದಾನ ನಿಗದಿಪಡಿಸಿಲ್ಲ.

ಉ) ಒಟ್ಟು ರೂ. 119.80 ಲಕ್ಷ ವೆಚ್ಚ ಮಾಡಲಾಗಿದೆ. ವಿವರಗಳನ್ನು ಅನುಬಂಧ–2 ರಲ್ಲಿ ನೀಡಲಾಗಿದೆ.

ಅನುಬಂಧ – 1

ಕ್ರ. ಸಂ.	ತಾಲ್ಲೂಕು	ಕಾಮಗಾರಿಯ ಹೆಸರು	ಅಂದಾಜು ಮೊತ್ತ	ನಿಗಧಿ ಪಡಿಸಿದ ಮೊತ್ತ	ಬಿಡುಗಡೆಯಾದ ಮೊತ್ತ	ಪ್ರಾರಂಭದಿಂದ ಇಲ್ಲಿಯವರೆಗೆ ಆದ ವೆಚ್ಚ
1	ಧಾರವಾಡ	ನವಲೂರು ಕೆರೆ ಹೊಳು ತೆಗೆಯುವುದು ಹಾಗೂ ಕಾಲುವೆ ಸುಧಾರಣೆ	9.00	9.00	8.99	8.99
2	ಧಾರವಾಡ	ಬೊಕ್ಕಾಪುರ ಕೆರೆ ಹೂಳು ತೆಗೆಯುವುದು ಹಾಗೂ ಕಾಲುವೆ ಸುಧಾರಣೆ	24.45	24.45	23.06	23.06
3	ಹುಬ್ಬಳ್ಳಿ	ಅರಳೆಕಟ್ಟೆ ಕೆರೆ ಹೂಳು ತೆಗೆಯುವುದು ಹಾಗೂ ಕಾಲುವೆ ಸುಧಾರಣೆ	15.50	15.50	13.50	13.50
4	ಕುಂದಗೋಳ	ಗೌಡಗೇರಿ ಕೆರೆ ಹೂಳು ತೆಗೆಯುವುದು ಹಾಗೂ ಕಾಲುವೆ ಸುಧಾರಣೆ	27.50	27.50	25.28	25.28
5	ಧಾರವಾಡ	ಡೋರಿ ಕೆರೆ ಹೂಳು ತೆಗೆಯುವುದು ಹಾಗೂ ಕಾಲುವೆ ಸುಧಾರಣೆ	29.90	29.90	19.53	19.53

1	2	3	4	5	6	7
6	ಹುಬ್ಬಳ್ಳಿ	ಬುದ್ನಾಳ ಕೆರೆ ಹೂಳು ತೆಗೆಯುವುದು ಹಾಗೂ ಕಾಲುವೆ ಸುಧಾರಣೆ	27.60	27.60	19.44	19.44
7.	ಕಲಘಟಗಿ	ಸಂಗಮೇಶ್ವರ ಕೆರೆ ಹೂಳು ತೆಗೆಯುವುದು ಹಾಗೂ ಕಾಲುವೆ ಸುಧಾರಣೆ	29.97	29.97	21.35	21.35
8.	ಕಲಘಟಗಿ	ಹಿರೇಹೊನ್ನಳ್ಳಿ ಏತ ನೀರಾವರಿ ಯೋಜನೆ	19.38	19.38	10.00	19.00
9.	ಧಾರವಾಡ	ಡೌಗಿನಾಲಾ ಬ್ಯಾರೇಜ್ ನಿರ್ಮಾಣ	14.90	40.00	31.97	31.97
10	ಕಲಘಟಗಿ	ಮಡಕಿಹೊನ್ನಳ್ಳಿ ಬ್ಯಾರೇಜ್ ನಿರ್ಮಾಣ	10.46	26.00	35.41	35.41
11	ಧಾರವಾಡ	ಹೂಲಿಕೆರೆ ಕೆರೆ ಸುಧಾರಣೆ	40.00	49.00	28.61	28.61
12	ಧಾರವಾಡ	ವೀರಾಪುರ ಎಡದಂಡೆ ಕಾಲುವೆ ಸುಧಾರಣೆ	3.29	5.00	4.11	4.11
13	ಹುಬ್ಬಳ್ಳಿ	ಬುದ್ನಾಳ ಕೆರೆ ಸುಧಾರಣೆ	14.10	19.00	18.19	18.19
14	ಕಲಘಟಗಿ	ಸೋಮನಕೊಪ್ಪ ಹೊಸಕೆರೆ ಸುಧಾರಣೆ	170.00	331.00	154.51	154.51
15	ಕಲಘಟಗಿ	ಮಿಶ್ರಿಕೋಟೆ ಬಂದಾರ ನಿರ್ಮಾಣ	29.99	60.45	24.86	24.86
16	ಕಲಘಟಗಿ	ಶಿಗಿಲಕೆರೆಯಿಂದ ತಬಕದ ಹೊನ್ನಳ್ಳಿವರೆಗೆ ಪೂರಕ ಕಾಲುವೆ ನಿರ್ಮಾಣ	21.00	21.00	20.03	20.03
17	ಕಲಘಟಗಿ	ತಬಕದ ಹೊನ್ನಳ್ಳಿಯಿಂದ ಜಿನ್ನೂರ ವರೆಗೆ ಪೂರಕ ಕಾಲುವೆ ನಿರ್ಮಾಣ	23.00	23.00	8.86	8.86
18	ಧಾರವಾಡ	ಕೃಷಿ ವಿಶ್ವವಿದ್ಯಾಲಯ ಕೆರೆ ಅಭಿವೃದ್ಧಿ	10.00	10.00	8.54	8.54
19	ಕಲಘಟಗಿ	ದೇವರಕೊಪ್ಪ ಕೆರೆ ಕಾಲುವೆ ಸುಧಾರಣೆ	4.5	4.74	4.74	4.74
20	ಕಲಘಟಗಿ	ಕಾಮಧೇನು ಬಂದಾರ ಸುಧಾರಣೆ	4.50	6.49	6.49	6.49
21	ಕುಂದಗೋಳ	ಗೌಡಗೇರಿ ಕೆರೆ ಕಾಲುವೆ ಸುಧಾರಣೆ	21.00	21.00	3.45	3.45

1	2	3	4	5	6	7
22	ಧಾರವಾಡ	ಹೊಸಾಯಲ್ಲಾಪುರ ಹಿರೇಕೆರೆ ಹೂಳೆತ್ತುವುದು	30.00	30.00	16.55	16.55
23	ಧಾರವಾಡ	ಹೊಸಯಲ್ಲಾಪುರ ಕೆರೆ ಕಾಲುವೆ ಆಧುನೀಕರಣ	8.00	8.00	5.26	5.30
24	ಧಾರವಾಡ	ವರವಿನಾಗಲಾವಿ ಕೆರೆ ಆಧುನೀಕರಣ	15.00	15.00	16.34	16.34
25	ಧಾರವಾಡ	ನರೇಂದ್ರಕೆರೆ ಕಾಲುವೆ ಸುಧಾರಣೆ	4.0	4.00	2.13	2.13
26	ಕಲಘಟಗಿ	ಮುಕ್ಕಲ್ ಕೆರೆ ಸ.ನಂ.95ರ ಕಾಲುವೆ ಸುಧಾರಣೆ	1.50	1.50	0.49	0.49
27	ಹುಬ್ಬಳ್ಳಿ	ಇನಾಂ ಮೀರಾಪುರ ಹತ್ತಿರ ಬಂದಾರ ನಿರ್ಮಾಣ	6.00	10.00	5.58	5.58
28	ಕಲಘಟಗಿ	ಗಳಗಿನಗಟ್ಟಿ ಏತನೀರಾವರಿ ಯೋಜನೆ	123.00	123.00	14.85	14.85
		ಒಟ್ಟು	737.6	1001.49	561.12	561.12

ಅನುಬಂಧ – 2

ಕ್ರ. ಸಂ.	ತಾಲ್ಲೂಕು	ಕಾಮಗಾರಿಯ ಹೆಸರು	ಅಂದಾಜು ಮೊತ್ತ	ನಿಗಧಿ ಪಡಿಸಿದ ಮೊತ್ತ	ಬಿಡುಗಡೆ ಯಾದ ಮೊತ್ತ	ಪ್ರಾರಂಭದಿಂದ ಇಲ್ಲಿಯವರೆಗೆ ಆದ ವೆಚ್ಚ
1	ಕಲಘಟಗಿ	ಸೋಮನಕೊಪ್ಪ ಹೊಸಕೆರೆ ನಿರ್ಮಾಣ	170.00	331.00	154.51	154.51
2	ಕಲಘಟಗಿ	ಮಿಶ್ರಿಕೋಟೆ ಬಂದಾರ ನಿರ್ಮಾಣ	24.99	60.46	24.86	24.86
3	ಹುಬ್ಬಳ್ಳಿ	ಇನಾಂ ಮೀರಾಪುರ ಹತ್ತಿರ ಬಂದಾರ ನಿರ್ಮಾಣ	6.00	10.00	5.58	5.58
4	ಕಲಘಟಗಿ	ಗಳಗನಗಟ್ಟಿ ಏತ ನೀರಾವರಿ ಯೋಜನೆ	123.00	123.00	14.85	14.85
		ಒಟ್ಟು	328.99	324.46	199.8	199.8